Sri G. B. SHANKAR RAO.—I have said that the jeep has been repaired at a cost of Rs. 4,750.

MR. SPEAKER.—Question No. 619 and 630 will be held over as the Minister is unwell and he is not coming.

SHORT NOTICE QUESTION AND ANSWER

Arrests in Davanagere during July 1966.

Q.—37. Sri S. GOPALA GOWDA (Thirthahalli) Sri Gangadhar Namoshi (Gulbarga) and Sri A. KERISHNA SHETTY (Mangalore-II).—

Will the Minister for Home be pleased to state:—

(*a*) whether it is a fact that a number of persons were arrested on the morning of 17th July 1966 at Davanagere at the time of the M.P.C.C. session ;

(*b*) If so, the number of persons arrested ;

(*c*) whether it is a fact that one of the persons so arrested is an advocate and Chairman, Land Development Bank, Chitradurga ?

A.—Sri M. V. RAMA RAO (Minister for Home).—

(*a*) Yes.
(*b*) 14.
(*c*) Yes.

ಶ್ರೀ ಎಸ್. ಗೋಪಾಲ ಗೌಡ.—17-7-1966ನೇ ದಿವಸ ದಾವಣಗೆರೆಯಲ್ಲಿ 144ನೇ ಸೆಕ್ಷನ್ ಜಾರಿ ಮಾಡಿದ್ದರೇ ?

ಶ್ರೀ ಎಂ. ವಿ. ರಾಮರಾವ್.—ಇಲ್ಲಿ ಪೋಲೀಸ್ ಕಾನೂನು ಪ್ರಕಾರ ನಿಷೇಧಾಜ್ಞೆ ಹಾಕಿದ್ದರು.

Sri K. LAKKAPPA.—Section 144 was promulagated and police staff was posted there and it was an unneccessary expenditure. Therefore, how many police men were posted ?

MR. SPEAKER.—It does not come under a supplementary.

Sri C. J. MUCKANNAPPA.—When the M.P.C.C. was held at Davanagere what was the apprehension expected by the Government as to issue direction to promulgate section 144 and take 14 people into custody ?

Sri M. V. RAMA RAO.—Precautionary measures were taken to ensure that breach of peace did not occur.

ಶ್ರೀ ಸಿದ್ಧಯ್ಯ ಕಾಶೀಮಠ.—144 ಸೆಕ್ಷನ್ ಜಾರಿ ಮಾಡಿದ್ದರೂ ಕೂಡ ಎಂ. ಪಿ. ಸಿ. ಸಿ. ಮೀಟಿಂಗ್ ಹೇಗೆ ಕಂಡಕ್ಟ್ ಮಾಡಿದರು ?

ಶ್ರೀ ಎಂ. ವಿ. ರಾಮರಾವ್.—ನಾನು ಹಾಗೆ ಹೇಳಲಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—14 ಜನರನ್ನು ಬಂಧಿಸಲಾಯಿತು ಎಂದು ಉತ್ತರ ಕೊಟ್ಟಿದ್ದೀರಿ. ಅವರನ್ನು ಯಾವ ಕಾಲದಲ್ಲಿ ಬಂಧಿಸಿದರು ? ಯಾವ ಕಾರಣಕ್ಕಾಗಿ ? ಅವರ ಮೇಲೆ ಮೊಕದ್ದಮೆ ಹಾಕಿದ್ದಾರೆಯೇ ?

ಶ್ರೀ ಎಂ. ವಿ. ರಾಮರಾವ್.—ಅವರನ್ನು 17ನೇ ತಾರೀಖಿನ ದಿನ ಬೆಳಗ್ಗೆ ದಸ್ತಗಿರಿ ಮಾಡಿದರು. ಬ್ಲ್ಯಾಕ್ ಫ್ಲ್ಯಾಗ್ ಡಿಮಾನ್ಸ್ಟ್ರೇಶನ್ ಮಾಡುವ ಪ್ರೊಸೆಶನ್ ತೆಗೆದುಕೊಂಡು ಬಂದರು. ಹಾಗೆ ಮಾಡಬೇಡಿ, ಪ್ರೊಹಿಬಿಟರಿ ಆರ್ಡರ್ ಜಾರಿಯಲ್ಲಿದೆ ಎಂದು ಆರ್ಡರ್ ತೋರಿಸಿದರೂ ಕೂಡ ಅವರು ಮಾಡುತ್ತೇವೆ ಎಂದು ಅಂದರು. ಆದುದರಿಂದ ಅವರನ್ನು ದಸ್ತಗಿರಿ ಮಾಡಿ ಕಸ್ಟಡಿಯಲ್ಲಿ ಇಟ್ಟಿದ್ದರು. ಆಮೇಲೆ ಅವರನ್ನು ಬಿಟ್ಟಿದ್ದಾರೆ.

ಶ್ರೀ ಎಸ್. ಗೋಪಾಲ ಗೌಡ.—ಕ್ಲೇನು ಹಾಕಿದ್ದಾರೆಯೆ ?

ಶ್ರೀ ಎಂ. ವಿ. ರಾಮರಾವ್.—ಅದನ್ನು ಪೇಪರ್ಸ್ ತರಿಸಿ ನೋಡಬೇಕು.

ಶ್ರೀ ಎಸ್. ಶಿವಪ್ಪ.—144 ಸೆಕ್ಷನ್ ಜಾರಿಯಲ್ಲಿ ಇದ್ದರೂ ಕೂಡ ಡಾವಣಗೆರೆಯಲ್ಲಿ ಸಾಮಿರಾರು ಜನ ಕಾಂಗ್ರೆಸ್ಸಿಗರು ಸೇರಿ ಎಂ. ಪಿ. ಸಿ. ಸಿ. ಮೀಟಿಂಗ್ ನಡೆಸಿದವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

Sri M. V. Rama Rao.—The meeting of the M.P.C.C is not an unlawful assembly.

ಶ್ರೀ ಗಂಗಾಧರ ನಾಮೋಶಿ.—ಡಾವಣಗೆರೆಯಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಅಧ್ಯಕ್ಷರನ್ನು ಅರೆಸ್ಟ್ ಮಾಡಿದ ಕಾರಣವೇನು ? ಅವರನ್ನು ಎಲ್ಲಿಯಾವ ಸ್ಥಾನದಲ್ಲಿ ಇಟ್ಟಿದ್ದರು ?

ಶ್ರೀ ಎಂ. ವಿ. ರಾಮರಾವ್.—ಅರೆಸ್ಟ್ ಮಾಡಿ ರಾಕಪ್ಪಿನಲ್ಲಿ ಇಟ್ಟಿದ್ದರು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪಾರ್ಟಿ ಮೀಟಿಂಗಿಗೆ ತೊಂದರೆ ಮಾಡುತ್ತಾರೆಂದು ಎಷ್ಟು ಜನ ಪೋಲೀಸರನ್ನು ಹಾಕಬೇಕು ಎಂದು ಕಾಗದ ಬರೆದಿದ್ದರು ? ಈ ಪೋಲೀಸರ ಖರ್ಚನ್ನು ಪಾರ್ಟಿ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆಯೇ ? ಈ ಬಗ್ಗೆ ಖರ್ಚಾದ ಹಣ ಎಷ್ಟು ?

ಶ್ರೀ ಎಂ. ವಿ. ರಾಮರಾವ್.—ಪೋಲೀಸರನ್ನು ಹಾಕ ಬೇಕು ಎಂದು ಅವರು ಕೇಳಿರಲಿಲ್ಲ.

ಶ್ರೀ ಎಸ್. ಶಿವಪ್ಪ.—ಡಾವಣಗೆರೆಯಲ್ಲಿ ನಡೆದ ಕಾಂಗ್ರೆಸ್ ಪಾರ್ಟಿ ಮೀಟಿಂಗಿಗೆ ಎಲ್ಲಾ ಮಂತ್ರಿಗಳೂ ಬರುತ್ತಾರೆ, ಸಾರ್ವಜನಿಕ ಮುಖಂಡರು ಅವರನ್ನು ಭೇಟಿ ಮಾಡಿ ಜನರ ಕುಂದು ಕೊರತೆಗಳನ್ನು ಅವರ ಮುಂದೆ ಇಡುತ್ತಾರೆ ಎಂದು ಇರುವಾಗ್ಗೆ ಈ ರೀತಿ ಮಾಡಿರುವುದು ಕಾನೂನು ಬಾಹಿರವಾಗುವುದಿಲ್ಲವೇ ?

ಶ್ರೀ ಎಂ. ವಿ. ರಾಮರಾವ್.—ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ಸಾರ್ವಜನಿಕರು ಮಂತ್ರಿಗಳನ್ನು ಭೇಟಿ ಮಾಡಿದರು. ಮುಖ್ಯ ಮಂತ್ರಿಗಳನ್ನು ಪ್ರಮುಖರು ಬಂದು ಭೇಟಿ ಮಾಡಿದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—14 ಜನರ ಪೈಕಿ 11 ಜನರನ್ನು ಒಂದು ಕಡೆ, 3 ಜನರನ್ನು ಒಂದು ಕಡೆ ಇಟ್ಟು, ಆ ಮೂರು ಜನರಲ್ಲಿ ಒಬ್ಬರಾದ ಚಿತ್ರದುರ್ಗ ಜಿಲ್ಲೆಯ ಭೂ ಅಭಿವೃದ್ಧಿ ಬ್ಯಾಂಕಿನ ಚೇರ್‌ಮನ್‌ರನ್ನ ಬೇರೆ ಕಡೆ ತೆಗೆದುಕೊಂಡು ಹೋಗಿ ಅವರ ಮೈಮೇಲೆ ಇದ್ದ ಬಚ್ಚೆಗಳನ್ನು ಬಿಚ್ಚಿಸಿ, ಬನಿಯನ್ ಮತ್ತು ಅಂಡರ್‌ವೇರ್ ಮಾತ್ರ ಬಿಟ್ಟು ರಾಕಪ್‌ನಲ್ಲಿ ಹಾಕಿ ಅವರಿಗೆ ಅಮಾನುಷವಾದ, ಮನುಷ್ಯನಿಗೆ ಕೊಡಬಾರದ ಹಿಂಸೆಯನ್ನು ಕೊಟ್ಟಿದ್ದು, ಆ ರೀತಿ ಹಿಂಸೆಯನ್ನು ಕೊಟ್ಟಿದ್ದರ ಬಗ್ಗೆ ವಿಚಾರಣೆ ಮಾಡಬೇಕೆಂದು ಮಾನ್ಯ ಮಂತ್ರಿಗಳಿಗೂ ಮತ್ತು ಜಿಲ್ಲಾಧಿಕಾರಿಗಳಿಗೂ ಅವರಿಂದ ಏನಾರೂ ಮನವಿ ಬಂಧಿದೆಯೇ ಸ್ವಾಮಿ ?

ಶ್ರೀ ಎಂ. ವಿ. ರಾಮರಾವ್.—ಮಾನ್ಯ ಸದಸ್ಯರು ಹೇಳತಕ್ಕ ಭೂ ಅಭಿವೃದ್ಧಿ ಬ್ಯಾಂಕಿನ ಪ್ರೆಸಿಡೆಂಟರು ಎಂದು ಹೇಳುವವರು ದಸ್ತಗಿರಿಯಾಗಿದ್ದರು ಪ್ರಾಯಶಃ ಅವರಿಗೆ ಹಿಂದೆ ದಸ್ತಗಿರಿ ಆಗಿದ್ದ ಅನುಭವವಿಲ್ಲದೆ ಹೆದರಿಕೆಯಿಂದ ಬೇಧಿ ಆಗುತ್ತಿರಬಹುದು. ಆದರ ದೆಸೆಯಿಂದ ಮೆಡಿಕಲ್ ಟ್ರೀಟ್‌ಮೆಂಟ್ ಬೇಕು ಎಂದು ಕೇಳಿದರು. ಮೆಡಿಕಲ್ ಟ್ರೀಟ್‌ಮೆಂಟಿಗೆ ಕರೆದುಕೊಂಡು ಹೋಗಲಾಯಿತು. ಈ ಕಾರಣಕ್ಕೋಸ್ಕರ ಅವರು ಬಚ್ಚೆಗಳನ್ನು ತೆಗೆದು ಅಂಡರ್‌ವೇರ್‌ನಲ್ಲಿ ಜೈಲಿನಲ್ಲಿದ್ದರು.

ಶ್ರೀ ಗಂಗಾಧರ ನಾಮೋಶಿ.—ಈ ಚೇರ್‌ಮನ್ ಆಗಿದ್ದವರು ಮಾನ್ಯ ಮಂತ್ರಿಗಳ ಹತ್ತಿರ ಅರ್ಜಿ ಕಳಿಸಿದರಲ್ಲ, ಅದರ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಂಡರು ?

ಶ್ರೀ ಎಂ. ವಿ. ರಾಮರಾವ್.—ನನಗೆ ಅರ್ಜಿ ಕಳುಹಿಸಲಿಲ್ಲ. ನೆಕ್ಸ್ಟೊಕ್ಕೋಸ್ಕ್ಕೆಲ್ ಮಾಡಿ ಮಾನ್ಯ ಸದಸ್ಯರೆಲ್ಲರಿಗೂ ಕಳುಹಿಸಿದ ಹಾಗೆ ಕಾಣುತ್ತದೆ. ಮಾನ್ಯ ಸದಸ್ಯರು ನನಗೆ ಕೂಡ ಕಳುಹಿಸಿದರು. ಅದರ ಮೇಲೆ ಏನು ನಡೆದಿದೆ ಎಂದು ವಿಚಾರಣೆ ಮಾಡಿ ನಡೆದದ್ದನ್ನು ಹೇಳಿದ್ದೇನೆ.

ಶ್ರೀ ಎಸ್. ಗೋಪಾಲ ಗೌಡ.—ಈ ಚಿತ್ರದುರ್ಗದ ವಕೀಲರನ್ನು ಏತಕ್ಕಾಗಿ ಬನಿಯನ್ ಮತ್ತು ನಿಕ್ಕರ್‌ನಲ್ಲಿ ಇಟ್ಟರು ಎನ್ನುವುದಕ್ಕೆ ಒಂದು ವಿವರಣೆಯನ್ನು ಕೊಟ್ಟಿದ್ದಾರೆ. ಈ ವಿವರಣೆಯನ್ನು ಯಾವ ಅಧಿಕಾರಿ ಕೊಟ್ಟಿದ್ದಾನೆಯೋ ಆ ಅಧಿಕಾರಿಯ ವರದಿಯನ್ನು ಸಭೆಯ ಮುಂದೆ ಇಡುವುದಕ್ಕೆ ಸಾಧ್ಯವೇ ಸ್ವಾಮಿ ?

ಶ್ರೀ ಎಂ. ವಿ. ರಾಮರಾವ್.—ನಾನು ಹೇಳುತ್ತಿದ್ದೇನೆ. ಇನ್ನು ಯಾವ ರಿಪೋರ್ಟೂ ಇಡಬೇಕಾದ ಅಗತ್ಯವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಬಂಧನದಲ್ಲಿದ್ದ ವಕೀಲರು ಬಂಧನವಾಗಿ, ಬಂಧನಕ್ಕೆ ಹೆದರಿಕೊಂಡು ಭೇದಿ ಮಾಡಿಕೊಂಡಾಗ ಶ್ರೀಮಾನ್ ರಾಮರಾಯರು, ಗೃಹಮಂತ್ರಿಗಳು, ಆ ಲಾಕಪ್‌ನಲ್ಲಿ ಹಾಜರಿದ್ದು ಕಣ್ಣಲ್ಲಿ ನೋಡಿದರೋ ಅಥವಾ ಈ ರೀತಿ ಊಹಾಪೋಹ ಮಾಡಿ ಉತ್ತರವನ್ನು ಕೊಟ್ಟಿದ್ದಾರೆಯೋ? ಊಹಾಪೋಹ ಮಾಡಿ ಕೊಟ್ಟಿರುವ ಈ ಉತ್ತರವನ್ನು ಪಾಪನು ತೆಗೆದುಕೊಳ್ಳುವಂತೆ ತಾವು ಅವರನ್ನು ಬಲಾತ್ಕರಿಸುತ್ತೀರಾ?

ಶ್ರೀ ಎಂ. ವಿ. ರಾಮರಾವ್.—ಈ ಬಂಧನದಲ್ಲಿದ್ದಂಥ ಒಬ್ಬರ ವಿಷಯ ಅವರು ಹೇಳುತ್ತಿರುವುದು, ನಾನು ಹೋಗಿ ಜೈಲಿನಲ್ಲಿ ನೋಡಿಲ್ಲ, ಊಹಾಪೋಹ ಅದಲ್ಲ ಸರ್ಕಾರಕ್ಕೆ ಬಂದಿರತಕ್ಕ ಮಾಹಿತಿಯ ಮೇರೆ ಹೇಳುತ್ತಿದ್ದೇನೆ. ನಾನು ಹೇಳತಕ್ಕದ್ದನ್ನು ಅಂಗೀಕರಿಸಬೇಕು.

ಶ್ರೀ ಎ. ಕೃಷ್ಣಶೆಟ್ಟಿ.—ಮಾನ್ಯ ಪೋಲೀಸ್ ಮಂತ್ರಿಗಳು ಸ್ವಲ್ಪ ಸಭ್ಯತನದ ಚೌಕಟ್ಟಿನಲ್ಲಿ ಉತ್ತರ ಕೊಡುತ್ತಿದ್ದಾರೆನ್ನುವ ಸಂಶಯ ನನಗುಂಟು. ಬಂಧಿಸಲ್ಪಟ್ಟವರಿಗೆ ಭೇದಿಯಾಗಿ ಈ ರೀತಿ ಆಯಿತು ಎಂದು ಮಂತ್ರಿಗಳು ಹೇಳುತ್ತಾರೆ. ಅಲ್ಲಿ ಎಷ್ಟು ಪೋಲೀಸಿನವರು ಬಂದಿದ್ದರು, ಮಂತ್ರಿಗಳಿಗೆ ಮತ್ತು ಎಂ. ಪಿ. ಸಿ. ಸಿ. ಯ ಸದಸ್ಯರಿಗೆ ಪಾಂತಿಯಾಗಿತ್ತೆ ಎಂದು ಅವರನ್ನು ಕೇಳುತ್ತೇನೆ.

MR. SPEAKER.—It is disallowed.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಸರ್ಕಾರದವರು ಕೊಟ್ಟಿರತಕ್ಕ ಉತ್ತರದ ಪ್ರಕಾರ ಗೃಹಮಂತ್ರಿಗಳು, ಈ ವಕೀಲರು ಭೇದಿ ಮಾಡಿಕೊಂಡದ್ದು ಮತ್ತು ಆ ಕಾರಣಕ್ಕಾಗಿ ಅವರ ಬಟ್ಟೆಯನ್ನು ತೆಗೆದು ಹಾಕಬೇಕಾದ್ದಕ್ಕೆ ಸ್ವತಃ ಅಲ್ಲಿ ಇರಲಿಲ್ಲ, ನೋಡಲಿಲ್ಲ. ಆದುದರಿಂದ ಯಾವ ಅಧಿಕಾರಿ ಈ ವಿಶೇಷವಾದ ವರದಿಯನ್ನು ಮಾಡಿದ್ದಾರೆ, ಏನು ವರದಿ ಮಾಡಿದ್ದಾರೆ, ಅವರನ್ನು ಯಾವಾಗ ಬಂಧಿಸಲಾಯಿತು, ಯಾವ ಲಾಕಪ್‌ನಲ್ಲಿ ಇಟ್ಟರು, ಎಷ್ಟು ಘಂಟೆ ಕಾಲ ಇಟ್ಟಿದ್ದರು ಮತ್ತು ಅವರ ಮೇಲೆ ಏನು ಅಪಾದನೆಗಳನ್ನು ಹೊರಿಸಿದ್ದಾರೆ ಮತ್ತು ಯಾವಾಗ ಬಿಡುಗಡೆ ಆಯಿತು, ಇಂಥ ವಿಷಯಗಳಿಗೆ ಸಮಂಜಸವಾದ ಉತ್ತರವನ್ನು ಸರ್ಕಾರದವರು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ, ಸ್ವಾಮಿ.

MR. SPEAKER.—The learned member is unnecessarily padding many things. There is no question of putting any pressure on the Government for any reply.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ನಾನು ಖಾನಗಿ ಮನುಷ್ಯರ ದರ್ಬಾರಿನಲ್ಲಿಲ್ಲ. ನಾನು ಇಲ್ಲಿ ಒಬ್ಬ ಸದಸ್ಯನಂತೆ ಇದ್ದೇನೆ.....

MR. SPEAKER.—Order, order. If six supplementaries are put together I want to tell the Hon'ble Member that I am going to disallow all of them. If he is going to ask one supplementary, I am prepared to allow it. Putting too many supplementaries cannot be done during the question Hour. All that the hon. Member can ask is, "Will you furnish the information?". The member now thinks that he is exercising a right

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದವರು ಈಗತಾನೆ ಹೇಳಿದರು, ಒಬ್ಬ ವಕೀಲರನ್ನು ಬಂಧಿಸಿ ಅವರನ್ನು ಜೈಲಿನಲ್ಲಿಟ್ಟಾಗ ಅವರು ಭಯದಿಂದ ಭೇದಿ ಮಾಡಿಕೊಂಡರು, ಆದುದರಿಂದ ಬಟ್ಟೆ ತೆಗೆದು ಹಾಕಲಾಯಿತು ಎಂದು ಹೇಳಿದರು. ಮತ್ತೊಂದು ಉಪಪ್ರಶ್ನೆಗೆ, ನಾನು ಅಲ್ಲಿರಲಿಲ್ಲ, ಆ ರೀತಿ ವರದಿ ಬಂದಿದೆ ಎಂದು ಹೇಳಿದರು. ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ, ಯಾವ ಅಧಿಕಾರಿ ಈ ವಿಷಯದಲ್ಲಿ ವರದಿಯನ್ನು ಕೊಟ್ಟಿದ್ದಾರೆಯೋ ಅದನ್ನು ದಯವಿಟ್ಟು ಸಭೆಯ ಮುಂದೆ ಇಡಲಿಕ್ಕೆ ಸಾಧ್ಯವೇ?

ಶ್ರೀ ಎಂ. ವಿ. ರಾಮರಾವ್.—ಅದನ್ನು ಸಭೆಯ ಮುಂದೆ ಇಡಬೇಕಾದ ಅಗತ್ಯವಿಲ್ಲ. ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಅವರಿಂದ ವರದಿಯನ್ನು ತರಿಸಿದ್ದೇನೆ.

ಶ್ರೀ ಜಿ. ವಿ. ಗೌಡ.—ಲಾಕಪ್‌ನಲ್ಲಿ ಭೇದಿಯಾದ ವ್ಯಕ್ತಿಗೆ ಎಲ್ಲಿ ಮೆಡಿಕಲ್ ಏಡ್ ಒದಗಿಸಿದ್ದೀರಿ?

ಶ್ರೀ ಎಂ. ವಿ. ರಾಮರಾವ್.—ಮೆಡಿಕಲ್ ಏಡ್ ಕೊಟ್ಟಿದ್ದರೆ ಅದು ಅಸ್ಪತ್ರೆಯಲ್ಲಿ.

ಶ್ರೀ ಎಸ್. ಶಿವಪ್ಪ.—ಮಾನ್ಯ ಗೃಹ ಸಚಿವರು ಹೇಳಿದ ಮಾತಿನಲ್ಲಿ ಹೇಳುವುದಾದರೆ, ಒಬ್ಬ ಪದವೀಧರ ವಕೀಲ ಪೋಲೀಸ್ ಜೈಲಿನಲ್ಲಿ ಪೋಲೀಸಿನವರ ಭಯದಿಂದ ಭೇದಿ ಮಾಡಿಕೊಳ್ಳುವಂಥ ಹಿಂಸೆಯನ್ನು ಪೋಲೀಸಿನವರು ಕೊಟ್ಟಿರಬೇಕಾದರೆ ಅವನ್ನು ಮಾನ್ಯ ಸಚಿವರು ವಿಚಾರ ಮಾಡಿದ್ದಾರೆಯೇ?

ಶ್ರೀ ಎಂ. ವಿ. ರಾಮರಾವ್—ಮಾನ್ಯ ಸದಸ್ಯರು ಹೇಳತಕ್ಕದ್ದು ಕಲ್ಪನೆಯ ಮಾತು. ನಾನು ಹೇಳಿದಂಥ ವ್ಯಕ್ತಿಗೆ ಭೇದಿ ಆಗುತ್ತಿದ್ದುದರ ದೆಸೆಯಿಂದ ಅವರು ಬಟ್ಟೆ ತೆಗೆದಿಟ್ಟಿದ್ದರು ಎಂದು ಹೇಳಿದೆ. ಪೋಲೀಸಿನವರ ಭಯದಿಂದ ಭೇದಿಯಾಯಿತು ಎಂದು ಅವರು ಹೇಳುವುದು ನ್ಯಾಯವಲ್ಲ.

SRI G. V. GOWDA.—If medical aid is said to have been provided in the hospital, what was the compelling need to have his dress removed in the lock-up ?

ಶ್ರೀ ಎಂ. ವಿ. ರಾಮರಾವ್.—ಅವರಿಗೆ ಭೇದಿಯಾಗುತ್ತಿತ್ತು. ಅದಕ್ಕೋಸ್ಕರ ಬಟ್ಟೆಗಳನ್ನು ತೆಗೆದು ಇಟ್ಟಿದ್ದರು. 'ನೀಡ್' ಏನು ಅಂದರೆ ಅದೇ 'ನೀಡ್'.

SRI C. J. MUCKANNAPPA.—What was the ailment he was suffering from when he was taken into custody and what is the medical report ?

SRI M. V. RAMA RAO.—He was suffering from loose motions and therefore, as I said, his dress had been removed and thereafter he was taken to the doctor.

SRI C. J. MUCKANNAPPA.—What was the ailment for which treatment was given ? Is it for loose motions or for diarrhoea or dysentery and what is the medical report ?

2-00 P.M.

ಶ್ರೀ ಗಂಗಾಧರ ನಾಮೋಷಿ.—On a point of order, Sir. ಲಾ್ಯಂಡ್ ಡೆವಲಪ್ ಮೆಂಟ್ ಬ್ಯಾಂಕಿನ ಥೇರ್ಮನ್ನರಾಗಿ ಪಬ್ಲಿಕ್ ರೆಪ್ರೆಸೆಂಟೇಟಿವ್ಯಾಗಿ ಅಡ್ವೋಕೇಟ್ ಆಗಿರುವವರನ್ನು prisoner ಎಂದು ಕರೆಯುವುದು ಯಾವ ನ್ಯಾಯ ? ಅದನ್ನು ವಿತ್‌ಡ್ರಾ ಮಾಡುವಂತೆ ಹೇಳಬೇಕು.

(Some Hon. Members rose).

MR. SPEAKER.—Let me deal with the point of order raised by Sri Gangadhara Namoshi. He says that the Hon'ble Minister is in error in using that word with regard to an Advocate, who was arrested under such circumstances. The question is, does status change language or does he mean that ' prisoner ' is an unparliamentary word ?

SRI C. J. MUCKANNAPPA.—Prisoner is different from accused and accused is different from prisoner. Prisoner is Kaidi and accused is Aparadhi.

SRI GANGADHARA NAMOSHI.—What Sri Muckannappa said is correct.

MR. SPEAKER.—Accused by himself appearing in the court is not under arrest. But if a person who is under arrest, what is the word to be used ?

SOME HON'BLE MEMBERS.—Aparadhi.

MR. SPEAKER.—I have gathered facts. I will give my considered ruling tomorrow.

SRI K. LAKKAPPA.—The Hon'ble Minister was pleased to state that the information furnished by the officer cannot be furnished to this House. Can we infer that the officer has not furnished the correct information to Government ?

MR. SPEAKER.—It is not asking for information.

ಶ್ರೀ ಎಸ್. ಗೋಪಾಲಗೌಡ.—17ನೆಯ ತಾರೀಖು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆ ದಾವಣಗೆರೆಯಲ್ಲಿ ನಡೆಯುವ ಸಮಯದಲ್ಲಿ ಕೆಲವರು ಪ್ರದರ್ಶನ ಮಾಡಲು ಬಂದವರನ್ನು ಬಂಧಿಸರಾಯ್ತು. ರಾಜ್ಯದಲ್ಲಿ ಸಭೆ, ಮೆರವಣಿಗೆ, ಪ್ರದರ್ಶನ, ಮುಷ್ಕರ ಇತ್ಯಾದಿ ನಡೆಯುವುದನ್ನು ಕಾನೂನು ಬಾಹಿರವೆಂದು ಘೋಷಣೆ ಮಾಡಿರುವರೇ ?

ಶ್ರೀ ಎಂ. ವಿ. ರಾಮರಾವ್.—ಸಭೆ, ಮೆರವಣಿಗೆ ನಡೆಯುವುದು ಕಾನೂನು ಬಾಹಿರವೆಂದು ಘೋಷಣೆ ಮಾಡಿಲ್ಲ.

SRI C. J. MUCKANNAPPA.—Sir, my question has not been replied. I asked what was the medical report ?

SRI M. V. RAMA RAO.—He was taken to an *ex-Officio* Magistrate in the evening. He told the Magistrate that he was suffering from diaorrhoea. Thereafter he was taken by the police to Dr. Bondade for treatment.

MR. SPEAKER.—Question Hour is over.

QUESTIONS FOR ANSWERS ON THE DAY

(but not taken up)

Management of Annammadevaru Temple.

*Q.—686. Sri J. NARAYANAPPA (Mulbagal).—

Will the Minister for Revenue be pleased to state :—

(*a*) who is managing the temple of Annammadevaru located in Subedarchatram Road, Bangalore ;

(*b*) the income and expenditure of this temple per month ;

(*c*) who is getting this income and the amount of income Government are getting ;

(*d*) what is the value of silver, gold and cloth belonging to this temple ;

(*e*) whether Government intend to take over this temple to Muzrai Department ?

A.—Sri M. V. KRISHNAPPA (Minister for Revenue).—

(*a*) The temple is under private management.

(*b*) As this is under private management information is not readily available.

( ) Does not arise in view of reply to clauss (*b*), Government does not get any income.

(*d*) Does not arise in view of reply to clause (*b*).

(*e*) Government will not interfere with the management of the institution unless gross mis-management of the institution or any breach of trust thereof is proved or the management so desires.